ಎ.ಪಿ.ಎಂ.ಸಿ. ಮುಖಾಂತರ ಹಣ ಸಂದಾಯ.

901(1462) ಶ್ರೀ ಡಿ.ಆರ್. ಪಾಟೀಲ್ (ಗದಗ) :— ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರೈತ ಮತ್ತು ದಲ್ಲಾಲರ ಹಿತದೃಷ್ಟಿಯಿಂದ ಎ.ಪಿ.ಎಂ.ಸಿ. ಮುಖಾಂತರ ಹಣಸಂದಾಯ ಮಾಡುವ ಕಾನೂನಿನ ಅನುಷ್ಠಾನಕ್ಕಾಗಿ ನಿಗಧಿಪಡಿಸಿದ ದಿನಾಂಕ ಯಾವುದು;

ಆ) ಈ ಕಾನೂನನ್ನು ಅನುಷ್ಠಾನಗೊಳಿಸಲು ಎ.ಪಿಎಂ.ಸಿ.ಯಲ್ಲಿ ಕಲ್ಪಿಸಬೇಕಾದ ಸೌಲಭ್ಯಗಳು ಯಾವುವು;

ಇ) ಇದಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ರಾಜ್ಯಾದ್ಯಂತ ಏಕರೂಪ ಮಾರುಕಟ್ಟೆ ವ್ಯವಸ್ಥೆ ಜಾರಿಗೆ ಬರಲು ಸರ್ಕಾರ ಉದ್ದೇಶಿಸಿದೆಯೇ.

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :—

ಅ) ತಿದ್ದುಪಡಿ ಕಾಯಿದೆಯನ್ನು ಜಾರಿಗೆ ಮಾಡುವ ಪೂರ್ವ ಹೊಸ ವ್ಯವಸ್ಥೆಯ ಮೇರೆಗೆ ಖರೀದಿದಾರರು ದಲ್ಲಾಲರಿಂದ ಮಾರುಕಟ್ಟೆ ಸಮಿತಿಗೆ ಹಣ ತುಂಬಿಸಿಕೊಳ್ಳುವುದು, ರೈತರಿಗೆ ಪಾವತಿ ಮಾಡುವುದು, ಲೆಕ್ಕಪತ್ರಗಳನ್ನು ಇಡುವುದು ಪಾವತಿ ವಿಧಾನ, ಇದರಲ್ಲಿ ಉದ್ಭವಿಸಬಹುದಾದ ವಿವಾದಗಳ ಪರಿಶೀಲನೆ, ಅವಶ್ಯವಿರುವ ಸಿಬ್ಬಂದಿ, ಮುಂತಾದ ವಿಷಯಗಳ ಬಗ್ಗೆ ಸೂಕ್ತ ನಿಯಮಾವಳಿಗಳ ರಚನೆಯ ಅಗತ್ಯವಿದೆಯೇ ಎಂಬುದನ್ನು ಮತ್ತು ಈ ಬೃಹತ್ ಕಾರ್ಯವನ್ನು ಕೈಗೆತ್ತಿಕೊಳ್ಳುವ ಮೊದಲು ಅನುಸರಿಸಬೇಕಾದ ಕ್ರಮಗಳನ್ನು ಪರಿಶೀಲಿಸುವುದು ಅಗತ್ಯವಾಗಿದ್ದು ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) ಮಾರುಕಟ್ಟೆ ಕಾಯ್ದೆಗೆ ಮಾಡಿರುವ ತಿದ್ದುಪಡಿಗಳನ್ನು ರಾಜ್ಯದ ಎಲ್ಲಾ ಮಾರುಕಟ್ಟೆ ಸಮಿತಿಗಳಲ್ಲಿ ಜಾರಿಗೊಳಿಸುವುದರಿಂದ ಕೃಷಿ ಉತ್ಪನ್ನಗಳ ಈಗಿನ ಮಾರಾಟ ವ್ಯವಹಾರ ಮೂಲ ವ್ಯವಸ್ಥೆಯನ್ನೆ ಬದಲಾವಣೆ ಮಾಡುವ ಒಂದು ಕ್ರಮವಾಗಿದ್ದು, ಇದರಿಂದಾಗುವ ಆಗುಹೋಗುಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಉದ್ದೇಶಿಸಿದೆ.